ಮಾಡಿಕೊಳ್ಳುವುದಿಲ್ಲ. ಇಷ್ಟಕ್ಕೂ ನನಗೀಗ ಮಗು ಬೇಕೆನಿಸಿಲ್ಲ. ನಾನು ಒಂದೆರೆಡು ವರ್ಷ ಅಮೆರಿಕೆಗೆ ಹೊರಟಿರುವೆ. ಅಲ್ಲಿಂದ ಬಂದ ಮೇಲೆ ಯೋಚಿಸುತ್ತೇನೆ. ದಯವಿಟ್ಟು ಇನ್ನಾವತ್ತು ಹೀಗೆಲ್ಲ ಆಡಬೇಡಿ' ಅಂದಳು. ಭ್ರಮನಿರಸನವಾಯ್ತು. ಇನ್ನು ಹೇಳಿ ಉಪಯೋಗವಿಲ್ಲ ಅಂದುಕೊಂಡಳು. ಈ ತಲೆಮಾರೇ ಹೀಗೆಯೋ ಅಥವಾ ತನ್ನ ಸೊಸೆ ಮಾತ್ರ ಹೀಗೋ ಎಂಬುದೇ ಅರ್ಥವಾಗಲಿಲ್ಲ ಅವಳಿಗೆ. ಸೊಸೆಯ ಜೊತೆಗೆ ಮಗನೂ ಬದಲಾಗಿದ್ದಾನೆ ಅನ್ನಿಸಿದಾಗ ತುಂಬ ಕಳವಳವಾಯಿತವಳಿಗೆ.

ಎಲ್ಲಿ ತಪ್ಪಾಯಿತೆಂದು ತಿಳಿಯಲಿಲ್ಲವವಳಿಗೆ. ತಾನು ಉದಾರಿ, ಸಹೃದಯಿಯಾದ್ದರಿಂದ ತನ್ನೊಡನೆ ಹೊಂದಿಕೊಳ್ಳುವುದರಲ್ಲಿ ಯಾವ ಸಮಸ್ಯೆಯೂ ಸೊಸೆಯಾಗಿ ಬರುವವಳಿಗೆ ಇರುವುದಿಲ್ಲ ಅಂದುಕೊಂಡಿದ್ದಳವಳು. ತನ್ನ ಸ್ನೇಹಪರತೆ, ಸಹೃದಯತೆಗಳು ಸಂಬಂಧಗಳನ್ನು ಬೆಸೆಯುವುದೆಂಬುದು ಸುಳ್ಳೆಂದು ಮನವರಿಕೆಯಾಗತೊಡಗಿತು. ಎರಡು ತಲೆಮಾರುಗಳ ನಡುವಿನ ಅಂತರಗಳು, ಆಲೋಚನಾಕ್ರಮದಲ್ಲಿರುವ ಭಿನ್ನತೆಗಳು ಬದುಕಿನಲ್ಲಿ ದೊಡ್ಡ ಕಂದಕವಾಗುವ ಪರಿಗೆ ನೇರ ಸಾಕ್ಷಿಯಾಗಿದ್ದಳು.

ಹೇಳಿದಂತೆ ಸಿರೀಶಾ ಅಮೆರಿಕಕ್ಕೂ ಹೊರಟುಬಿಟ್ಟಳು. ವರ್ಷವೊಂದರಲ್ಲಿ ಮಗನೂ ಹೊರಟ. ಅವರಿಬ್ಬರ ಆ ನಿರ್ಗಮನ ಸುನಂದೆಗೆ ಹೇಳಿಕೊಳ್ಳುವಂತಹ ವ್ಯತ್ಯಾಸವನ್ನೇನೂ ತರಲಿಲ್ಲ. ತನ್ನ ಹಳ್ಳಿಯಲ್ಲಿನ ಬದುಕು ಯಾವತ್ತೂ ಪ್ರಿಯವಾಗಿತ್ತವಳಿಗೆ. ಆದರೆ, ಅವಳ ಬದುಕಿನ ನಿಜವಾದ ಆಘಾತವಾಗಿದ್ದು ಅವಳ ಗಂಡ ಹೃದಯಾಘಾತದಿಂದ ತೀರಿಹೋದಾಗ. ಆಮೇಲೆ ಅತ್ತೆಯೂ ಬಹುಕಾಲ ಉಳಿಯಲಿಲ್ಲ. ಮಗ ಒಂದು ಸಾರಿ ಬಂದು ಹೋಗಿದ್ದ. ಹಾಗೆ ಅತಿಥಿಯ ಹಾಗೆ ಬಂದುಹೋಗುವ, ಹಾಗೆಬಂದರೂ ಈ ಮನೆಯನ್ನು ತನ್ನದೆಂದು ಭಾವಿಸದ, ತಂದೆ ತಾಯಿಯರನ್ನೂ ತನ್ನವರೆಂದುಕೊಳ್ಳಲಾರದ ಅವನ ಆಲೋಚನಾಕ್ರಮವನ್ನು ಅವಳು ಒಪ್ಪಿಕೊಳ್ಳಲಾಗಲಿಲ್ಲ. ತನ್ನ ಹೃದಯಕ್ಕೆ ಅತ್ಯಂತ ಹತ್ತಿರದ ಮಗ, ತನ್ನ ಬದುಕಿನ ಕೇಂದ್ರವಾಗಿದ್ದ ಮಗ ಮನೆಗೆ ಬಂದರೆ ಪರಕೀಯನೊಬ್ಬ ತನ್ನ ಮನೆಗೆ ಬಂದಂತೆ ಅನ್ನಿಸತೊಡಗಿತು. ಈ ಚಿಂತೆಗಳಲ್ಲಿ ಒಂಟಿತನದ ಬೇಗುದಿಯಲ್ಲಿ ಬೇಯತೊಡಗಿದಳು ಸುನಂದೆ.

ಏಕತಾನತೆಗೆ ಕೊನೆ ಎಳೆದಂತಹ ಘಟನೆಯೊಂದು ಅವಳ ಬದುಕಿನಲ್ಲಿ ಘಟಿಸಿಹೋಯಿತು. ಬಹಳ ಹಿಂದೆಯೇ ಅಪಘಾತದಲ್ಲಿ ಗತಿಸಿ ಹೋಗಿದ್ದ ಅವಳ ಗಂಡನ ತಮ್ಮನ ಹೆಂಡತಿ ಇದ್ದಕ್ಕಿದ್ದಂತೆ ಮುಂಬೈಯಿಂದ ತನ್ನ ತುಂಬು ಗರ್ಭಿಣಿ ಮಗಳಾದ ವಿನತೆಯೊಡನೆ ಬಂದಿಳಿದಳು. ತನ್ನ ಒಬ್ಬಳೇ ಮಗಳು ಅಮೆರಿಕದಿಂದ ಬಾಣಂತನಕ್ಕಾಗಿ ಬರುತ್ತಿರುವುದಾಗಿಯೂ ಹಳ್ಳಿಯ ಮನೆಯಲ್ಲಿ ಬಾಣಂತನಕ್ಕೆ ಅನುಕೂಲವೆಂದು ಅಲ್ಲಿಗೆ ಬರುತ್ತೇನೆಂದು ಮುಂಚೆಯೇ ಕರೆಮಾಡಿ ಹೇಳಿದ್ದಳು. ಇಬ್ಬರೂ ಕೂಡಿ ಗರ್ಭಿಣಿ ಹುಡುಗಿಯ ದೇಖರೇಖಿಗೆ ನಿಂತುಬಿಟ್ಟರು. ಹತ್ತಿರದ ಜಿಲ್ಲಾ ಕೇಂದ್ರವಾದ ಹಾಸನಕ್ಕೆ ಕರೆದೊಯ್ದು ಅವಳ ತಪಶೀಲು ಮಾಡಿಸಿದಳು. ಬಸುರಿಗೆಂದು ವಿಶೇಷ ಆಹಾರ, ಆರೈಕೆಗಳು ಶುರುವಾದವು. ಬರುವ ಹೊಸ ಜೀವನವನ್ನು ಸ್ವಾಗತಿಸಲು ಇಬ್ಬರೂ ಸಂಭ್ರಮದಿಂದ ದಾರಿನೋಡತೊಡಗಿದರು. ಅಟ್ಟದಲ್ಲಿದ್ದ ಕರಿಮರದ ತೊಟ್ಟಿಲು ಕೆಳಗಿಳಿಯಿತು. ಮಗುವಿಗಾಗಿ ಮೃದುವಾದ ಅರಳೆಯ ಅರಿವೆಗಳನ್ನು ಹೊಂದಿಸಿಕೊಂಡರು. ಬಾಣಂತಿ ಮಗುವಿನ ನೀರುನಿಡಿಗಾಗಿ ಹಳ್ಳಿಯ ಅನುಭವಿ ಹೆಣ್ಣುಮಗಳನ್ನು ಗೊತ್ತು ಮಾಡಲಾಯಿತು.

ಅವರು ಬಂದ ಒಂದೆರೆಡು ದಿನಗಳಲ್ಲೇ ಸುನಂದೆಗೆ ಅರ್ಥವಾಗಿಹೋಯಿತು. ಮಗಳು ಬಸುರಿ ಅಂತ ತಾಯಿಗೆ ಸಂತೋಷವಾಗಲಿ, ಸಂಭ್ರಮವಾಗಲಿ ಇಲ್ಲ ಅಂತ. ಆ ಹುಡುಗಿಗೂ ಮಗುವಾಗುವ ಖುಷಿಯಾಗಲಿ, ತಾಯ್ತನದ ಸಡಗರವಾಗಲಿ ಇರಲಿಲ್ಲ. ಅವಳ ಗಂಡನ ಜೊತೆ ಮಾತು ಕತೆಯೂ ಕಂಡು ಬರಲಿಲ್ಲ. ಅವಳ ತಾಯಿ ತೋಟಕ್ಕೆ ಹೋದಾಗ ಏನು ಎತ್ತ ಎಂದು ವಿನತೆಯನ್ನು